ಆ) ಪೂರ್ವಭಾವಿ ಲೆಕ್ಕ ಪರಿಶೋಧಕರು ಈ ಕೆಳಕಂಡ ನ್ಯೂನತೆಗಳನ್ನು ಗುರುತಿಸಿರುತ್ತಾರೆ.

1. ಸಂಸ್ಥೆಯ ಮುಖ್ಯಸ್ಥರ ಅನುಮತಿಯಿಲ್ಲದೆ ಉಪ ವ್ಯವಸ್ಥಾಪಕರು (ಹಣಕಾಸು) ಇವರು ಲೆಕ್ಕ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯೊಬ್ಬರಿಗೆ ಸಣ್ಣ ಉಳಿತಾಯವನ್ನು ಉತ್ತೇಜಿಸುವ ಸಲುವಾಗಿ ಸಣ್ಣ ಉಳಿತಾಯ ಇಲಾಖೆಗೆ ಕಮಿಷನ್ ಅನ್ನು ಪಡೆಯಲು ಅನುಮತಿಸಿರುತ್ತಾರೆ.

2. ಒಕ್ಕೂಟಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸರಬರಾಜು ಮಾಡಲು:ಕಾಮಗಾರಿ ಕೆಲಸಗಳಿಗಾಗಿ ವಿವಿಧ ಸಂಸ್ಥೆಗಳಿಗೆ ಮುಂಗಡವಾಗಿ ನೀಡಿರುವ ರೂ. 60.15ಲಕ್ಷ ರೂ.ಗಳ ಮರು ಹೊಂದಾಣಿಕೆ ಆಗದಿರುವುದು.

3. ಒಕ್ಕೂಟವು ಧಾರವಾಡ ಪಶು ಆಹಾರ ಘಟಕದಿಂದ 1990-91ನೇ ಸಾಲಿನಲ್ಲಿ ಖರೀದಿಸಿದ ಪಶು ಆಹಾರ ಬಾಬ್ತು ರೂ. 3.28 ಲಕ್ಷ ಹಣವನ್ನು 2 ಬಾರಿ ಪಾವತಿ ಮಾಡಿರುವುದು.

ಮೈಸೂರು ಜಿಲ್ಲಾಧಿಕಾರಿಗಳು ಪ್ರಾಥಮಿಕ ತನಿಖೆಗೆ ಆದೇಶಿಸಿದ್ದು, ತನಿಖಾ ವರದಿಯ ಆಧಾರದ ಮೇಲೆ ಹಾಗೂ ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ದಿನಾಂಕ 5.9.1995ರಿಂದ ಮೈಸೂರು ಹಾಲೂ ಒಕ್ಕೂಟದ ಉಪ ವ್ಯವಸ್ಥಾಪಕರು (ಹಣಕಾಸು) ಇವರನ್ನು ವಿವರವಾದ ವಿಚಾರಣೆಯನ್ನು ಕಾಯ್ದಿರಿಸಿ ಆಮಾನತ್ತಿನಲ್ಲಿ ಇಡಲಾಗಿದೆ.

ಸಿಂಧನೂರು ತಾಲ್ಲೂಕಿಗೆ ಶುದ್ಧ ಕುಡಿಯುವ ನೀರಿನ ಸರಬರಾಜು.

2171 - ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು ಉಪ್ಪಿನ ಅಂಶ ಇರುವುದರ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಶುದ್ಧ ಕುಡಿಯುವ ನೀರನ್ನು ಎಷ್ಟು ಸಮಯದಲ್ಲಿ ಜನರಿಗೆ ಪೂರೈಸಲಾಗುವುದು?

ಇ) ಸಿಂಧನೂರು ತಾಲ್ಲೂಕನ್ನು ಕೇಂದ್ರಸರ್ಕಾರದ ರಾಜೀವ್ ಗಾಂಧಿ ವಾಟರ್ ಟೆಕ್ನಾಲಜಿ ಮಿಷನ್ ಯೋಜನೆಯಲ್ಲಿ ಆಳವಡಿಸಲಾಗಿದೆಯೇ? ಆಳವಡಿಸಿದ್ದಲ್ಲಿ, ಯೋಜನೆಯನ್ನು ಯಾವಾಗ ಪೂರ್ತಿಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

ಅ) ಸಿಂಧನೂರು ತಾಲ್ಲೂಕಿನ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮತ್ತು 77 ಹಳ್ಳಿಗಳಲ್ಲಿ ಉಪ್ಪಿನ ಅಂಶವು ಕುಡಿಯುವ ನೀರಿನಲ್ಲಿ ಇದೆ.

ಆ)	ಫ್ಲೋರೈಡ್ ಅಂಶ ಇರುವ ಗ್ರಾಮಗಳು	ಉಪ್ಪಿನ ಅಂಶ ಇರುವ ಗ್ರಾಮಗಳು	ಒಟ್ಟು
ಈಗಾಗಲೇ ಶುದ್ಧಕುಡಿಯುವ ನೀರನ್ನು ಸರಬರಾಜು ಮ್ಮಾಡುತ್ತಿರುವ ಗ್ರಾಮಗಳ ಸಂಖ್ಯೆ	13	25	38
ಗ್ರಾಮೀಣ ನೀರು ಸರಬ್ಬರಾಜು ಯೋಜನೆಗಳನ್ನು ವಿವಿಧ ಯೋಜನೆಗಳಡಿಯಲ್ಲಿ ತೆಗೆದುಕೊಂಡು ಮಾರ್ಚ್ 1997ರ ಅಂತ್ಯದೊಳಗೆ ಮುಗಿಸಲು ಯೋಜಿಸಿರುವ ಗ್ರಾಮಗಳ ಸಂಖ್ಯೆ	17	18	35
ವಿವಿಧ ನೀರು ಸರಬರಾಜು ಯೋಜನೆಗಳನ್ನು ರೂಪಿಸಿಲಾಗುತ್ತಿದ್ದು 2 ವರ್ಷಗಳಲ್ಲಿ ಮುಗಿಸಲು ಪ್ರಸ್ತಾಪಿಸಲಾಗಿರುವ ಗ್ರಾಮಗಳ ಸಂಖ್ಯೆ	17	34	51
ಒಟ್ಟು	**47**	**77**	**124**

ಇ) ಸಿಂಧನೂರು ತಾಲ್ಲೂಕಿನ 44 ಹಳ್ಳಿಗಳನ್ನು ಭಾರತ ಸರ್ಕಾರದಿಂದ ಅನುಮೋಧಿತವಾದ ರಾಜೀವ್ ಗಾಂಧಿ ವಾಟರ್ ಟೆಕ್ನಾಲಜಿ ಮಿಷನನ 44 ಯೋಜನೆಗಳನ್ನು ಈ ನಿಯೋಗದಡಿಯಲ್ಲಿ ತೆಗೆದುಕೊಳ್ಳಲಾಗಿದ್ದು, 32 ಯೋಜನೆಗಳ ಈಗಾಗಲೇ ಪೂರ್ಣಗೊಳಿಸಲಾಗಿದೆ. ಇನ್ನುಳಿದ 12 ಯೋಜನೆಗಳ ಕೆಲಸಗಳು ಪ್ರಗತಿಯಲ್ಲಿದೆ ಮತ್ತು ಈ ಯೋಜನೆಗಳನ್ನು ಆದಷ್ಟೂ ಬೇಗನೆ ಮುಗಿಸಲು ಪ್ರಸ್ತಾಪಿಸಲಾಗಿದೆ.

ರೈತರ ನೀರಾವರಿ ಪಂಪಸೆಟ್ಟಿನ ಬಗ್ಗೆ.

2172 - ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ನೀರಾವರಿ ಪಂಪಸೆಟಗೆ ವಿದ್ಯುತ್ ಒದಗಿಸಲು ಸರ್ಕಾರದವರು ಯಾವ ನಿಬಂಧನೆಗಳನ್ನು ಹಾಕಲಾಗಿದೆ;

ಆ) ಕೊರಟಗೆರೆ ತಾಲ್ಲೂಕಿಗೆ ಕೇವಲ 350 ಪಂಪಸೆಟ್ಟು 1994-95ರಲ್ಲಿ ಪಂಪಸೆಟಗಳಿಗಾಗಿ ಅನುಮತಿಯಕೊಟ್ಟು ಉಳಿದ 650 ಬಡ ರೈತರ ಪಂಪಸೆಟಗಳಿಗೆ ವಿದ್ಯುಚ್ಛಕ್ತಿ ಒದಗಿಸದಿರುವುದಿರಲು ಕಾರಣಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಆದ್ಯತೆ ಮತ್ತು ಹಿರಿತನ ಇವೆರನ್ನು ಪರಿಗಣಿಸಿ ವಿದ್ಯುತ್ ಸಂಪರ್ಕ ಒದಗಿಸಲಾಗುತ್ತಿದೆ. ಅಲ್ಲದೇ ತಾಂತ್ರಿಕ ಮತ್ತು ಆರ್ಥಿಕ ಸಾಧ್ಯತೆಗಳನ್ನು ಅಳತೆಗೋಲನ್ನಾಗಿ ಇಟ್ಟುಕೊಳ್ಳಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅರ್ಜಿದಾರರುಗಳಿಗೆ